ವಯೋಮಿತಿ ಸಡಿಲಿಸುವುದಕ್ಕೆ ನಮಗೆ ಅಧಿಕಾರವಿತ್ತು, ಸಡಿಲಿಸಿ ಅವರಿಗೆ ಅವಕಾಶ ಮಾಡಿಕೊಡುವ ಪ್ರಯತ್ನ ಮಾಡಿದ್ದೇವೆ. ಎರಡನೆಯದಾಗಿ, ಪ್ರವರ್ಗ–1 ರಲ್ಲಿ 29 ಜನ ಇದ್ದಾರೆ. ಪರಿಶಿಷ್ಟ ಜಾತಿ : ಪಂಗಡದವರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ಅವರಿಗೆ ಕೊಡಬೇಕೆಂಬ ಸರ್ಕಾರಿ ಅಧಿಸೂಚನೆ ಹಿನ್ನೆಲೆಯಲ್ಲಿ ಆ 29 ಜನರಿಗೆ ಅದನ್ನು ಅನ್ವಯ ಮಾಡುವ ಹಾದಿಯಲ್ಲಿದ್ದೇವೆ. ಸದ್ಯದಲ್ಲೇ ಬಹುಪಾಲು ಅವರಿಗೆ ನ್ಯಾಯ ಸಿಗುತ್ತದೆ.

ಶ್ರೀ ಎ.ವಿ. ಉಮಾಪತಿ :– ವಯೋಮಿತಿ 5 ವರ್ಷ ಸಡಿಲ ಮಾಡಿಕೊಟ್ಟರೂ ಕೂಡ ವಯೋಮಿತಿ ಮೀರಿದವರ ಪರಿಸ್ಥಿತಿ ಏನು? ಅವರ ಬಗ್ಗೆ ತಾವು ಚಿಂತನೆ ಮಾಡಬೇಕು. ಪ್ರವರ್ಗ–1 ರ 29 ಅಭ್ಯರ್ಥಿಗಳ ಬಗ್ಗೆ ಸಹಾನುಭೂತಿಯಿಂದ ಪರಿಗಣಿಸುತ್ತೇವೆಂಬ ಮಾತು ಹೇಳಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ಅವರ ಬಗ್ಗೆ ಕೂಡ ಚಿಂತನೆ ಮಾಡಿ ಮಾನವೀಯ ದೃಷ್ಟಿಯಿಂದ ಪ್ರವರ್ಗ–1 ರ ಉಪನ್ಯಾಸಕರನ್ನು ಯಾವ ರೀತಿ ಪರಿಗಣಿಸಬೇಕೆಂದಿದ್ದೀರೋ ಹಾಗೆಯೇ ಉಳಿದವರ ಬಗ್ಗೆಯೂ ಕೂಡ ಚಿಂತನೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ :– ಪರಿಗಣಿಸುತ್ತೇನೆ.

<u>ಖಾಲಿ ಇರುವ ಉಪನ್ಯಾಸಕರ ಮತ್ತು ಪ್ರಾಂಶುಪಾಲರ ಹುದ್ದೆಗಳು :–</u>

106 (905) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಪ್ರಾಂಶುಪಾಲರ ಸಂಖ್ಯೆ ಎಷ್ಟು; ಕಾಲೇಜುವಾರು ಸಂಪೂರ್ಣ ವಿವರ ನೀಡುವುದು;

ಆ) ಈ ಹುದ್ದೆಗಳು ಎಷ್ಟು ವರ್ಷದಿಂದ ಖಾಲಿ ಇದೆ;

ಇ) ಖಾಲಿ ಇರುವ ಉಪನ್ಯಾಸಕರ ಮತ್ತು ಪ್ರಾಂಶುಪಾಲರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪ್ರಾಂಶುಪಾಲರು – 03, ಉಪನ್ಯಾಸಕರು – 16 ಖಾಲಿ ಇರುತ್ತವೆ.

ಕಾಲೇಜುವಾರು ವಿವರ ಈ ಕೆಳಕಂಡಂತೆ ಇದೆ.

ಕ್ರ. ಸಂ.	ಕಾಲೇಜಿನ ವಿಳಾಸ	ಪ್ರಾಂಶುಪಾಲರು/ ಉಪನ್ಯಾಸಕರ ವಿವರ	ಎಂದಿನಿಂದ ಖಾಲಿ ಇದೆ.
1.	ಸರ್ಕಾರಿ ಪದವಿ ಪೂರ್ವ ಕಾಲೇಜು,ಕಾರ್ಕಳ	ಹಿಂದಿ ಉಪನ್ಯಾಸಕರು ಸಂಸ್ಕೃತ ಉಪನ್ಯಾಸಕರು ಇತಿಹಾಸ ಉಪನ್ಯಾಸಕರು ಅರ್ಥಶಾಸ್ತ್ರ ಉಪನ್ಯಾಸಕರು	14-06-1994 08-11-2005 15-10-2004 16-10-2006
2.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳ್ಮಣ್ಣು	ಕನ್ನಡ ಉಪನ್ಯಾಸಕರು	1994
3.	ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಬ್ರಿ	ಪ್ರಾಂಶುಪಾಲರು ರಾಜ್ಯಶಾಸ್ತ್ರ ಉಪನ್ಯಾಸಕರು	30-06-2005 16-10-2006
4.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬೈಲೂರು	ರಾಜ್ಯಶಾಸ್ತ್ರ ಉಪನ್ಯಾಸಕರು	30-06-1996
5.	ಸರ್ಕಾರಿ ಪದವಿ ಪೂರ್ವ ಕಾಲೇಜು, ಮುನಿಯಾಲು	ಪಾಂಶುಪಾಲರು ಕನ್ನಡ ಉಪನ್ಯಾಸಕರು	31-03-2004 31-12-2002
6.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬಜಗೋಳಿ	ಕನ್ನಡ ಉಪನ್ಯಾಸಕರು ಸಮಾಜಶಾಸ್ತ್ರ ಉಪನ್ಯಾಸಕರು	09-2005 20-06-2003
7.	ಸರ್ಕಾರಿ ಪದವಿ ಪೂರ್ವ ಕಾಲೇಜು, ಪಳ್ಳಿ	ಪ್ರಾಂಶುಪಾಲರು ಕನ್ನಡ ಉಪನ್ಯಾಸಕರು ಅರ್ಥಶಾಸ್ತ್ರ ಉಪನ್ಯಾಸಕರು ಸಮಾಜಶಾಸ್ತ್ರ ಉಪನ್ಯಾಸಕರು ರಾಜ್ಯಶಾಸ್ತ್ರ ಉಪನ್ಯಾಸಕರು	1997 14-07-2003 13-07-2003 14-07-2003 1993
8.	ಸರ್ಕಾರಿ ಪದವಿ ಪೂರ್ವ ಕಾಲೇಜು, ಕುಕ್ಕಜೆ	ರಾಜ್ಯಶಾಸ್ತ್ರ ಉಪನ್ಯಾಸಕರು	2002

9.	ಸರ್ಕಾರಿ ಪದವಿ ಪೂರ್ವ ಕಾಲೇಜು, ಸಾಣೂರು	ಕನ್ನಡ ಉಪನ್ಯಾಸಕರು	1994

ಆ) ಕ್ರಮ ಸಂಖ್ಯೆ 'ಅ' ರಲ್ಲಿ ಉತ್ತರ ನೀಡಲಾಗಿದೆ.

ಇ) ಸರ್ಕಾರವು ಈಗಾಗಲೇ 205 ಉಪನ್ಯಾಸಕರಿಗೆ ಪ್ರಾಂಶುಪಾಲರಾಗಿ ಪದೋನ್ನತಿ ನೀಡಲು ನಿರ್ಣಯಿಸಿದ್ದು, ಶೀಘ್ರದಲ್ಲಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಗೊಳಿಸಲಾಗುವುದು. ದಿನಾಂಕ: 12-07-2007 ಮತ್ತು 13-07-2007 ರಂದು 918 ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಉಪನ್ಯಾಸಕರಾಗಿ ಬಡ್ತಿ ನೀಡಲಾಗಿದ್ದು ಇವರಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ. ಹಾಗೆಯೇ ಈಗಾಗಲೇ 2175 ಉಪನ್ಯಾಸಕರ ನೇರ ನೇಮಕಾತಿಗೆ ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಈಗಾಗಲೇ 475 ಉಪನ್ಯಾಸಕರನ್ನು ಆಯ್ಕೆ ಮಾಡಲಾಗಿದ್ದು, ಆಯ್ಕೆ ಪಟ್ಟಿಯನ್ನು ಸಲ್ಲಿಸಿದ ಕೂಡಲೇ ನೇಮಕಾತಿ ಆದೇಶವನ್ನು ಹೊರಡಿಸಲಾಗುವುದು. ಉಳಿದ 1700 (27 ಬ್ಯಾಕ್‌ಲಾಗ್ ಹುದ್ದೆಗಳು) ಉಪನ್ಯಾಸಕರ ಹುದ್ದೆಗಳಿಗೆ ದಿನಾಂಕ 05-07-2007 ರಂದು ಅಧಿಸೂಚನೆ ಹೊರಡಿಸಲಾಗಿದೆ. ಈ ಹುದ್ದೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 114 (277)

(ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪರವರು ಹಾಜರಿರಲಿಲ್ಲ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 106 (905)

ಶ್ರೀ ವಿ. ಸುನೀಲ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ (ಅ) ಪ್ರಶ್ನೆಗೆ ಉತ್ತರ ನೀಡಿದ್ದಾರೆ. ಮಾನ್ಯ ಸಚಿವರು ದಯವಿಟ್ಟು ಗಮನಿಸಬೇಕು. ಅಧಿಕಾರಿಗಳು ನಿಮಗೆ ಈಗಾಗಲೇ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಒಟ್ಟು 21 ಜನ ಉಪನ್ಯಾಸಕರ ಕೊರತೆಯಿದೆ. ನಿಮ್ಮ ಉತ್ತರದಲ್ಲಿ 16 ಜನ ಉಪನ್ಯಾಸಕರ ಕೊರತೆ ಮಾತ್ರ ಇದೆ ಎಂದು ಹೇಳಿದ್ದೀರಿ. ಯಾವಾಗ ಭರ್ತಿ ಮಾಡುತ್ತೀರಿ ಎನ್ನುವಂಥ ಪ್ರಶ್ನೆಯಡಿಯಲ್ಲಿ, ಬೇರೆ ಬೇರೆ ಹಂತಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಹೇಳಿ ಕೆ.ಪಿ.ಎಸ್.ಸಿ ಮೂಲಕ ಎರಡು ಸಾವಿರಕ್ಕೂ ಉಪನ್ಯಾಸಕರನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಈಗಾಗಲೇ ಹೊಸ ಕಾಲೇಜುಗಳನ್ನೂ ಸಾಕಷ್ಟು ಪ್ರಾರಂಭ ಮಾಡಿರುವುದರಿಂದ ಮತ್ತು ಹಳೆಯ

ಕಾಲೇಜುಗಳು ಕೂಡ ದೊಡ್ಡ ಸಂಖ್ಯೆಯಲ್ಲಿ ಉಪನ್ಯಾಸಕರ ಕೊರತೆಯನ್ನೆದುರಿಸುತ್ತಿರುವುದರಿಂದ ಈ ವರ್ಷ ಮತ್ತಷ್ಟು ಹೊಸ ಕಾಲೇಜುಗಳನ್ನು ಕೊಡುತ್ತಿರುವುದರಿಂದ ನೀವು ಮಾಡುತ್ತಿರುವಂಥ ನೇಮಕಾತಿಗಳ ಮುಖಾಂತರ ಹೊಸ ಕಾಲೇಜು ಮತ್ತು ಹಳೆಯ ಕಾಲೇಜುಗಳಿಗೆ ಉಪನ್ಯಾಸಕರ ಭರ್ತಿ ಮಾಡಲಿಕ್ಕೆ ಸಾಧ್ಯವಾಗುತ್ತಿದೆಯೇ? ಉಪನ್ಯಾಸಕರ ಹುದ್ದೆ ಕೂಡ ಭರ್ತಿಯಾಗಲಿಕ್ಕೆ ಸಾಧ್ಯವಿದೆಯೇ ಎನ್ನುವಂಥದ್ದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

ಈಗಾಗಲೇ ಕೌನ್ಸಿಲ್‌ಗಳ ಮುಖಾಂತರ ನೀವು ಭರ್ತಿ ಮಾಡುತ್ತಿರುವುದರಿಂದ ಕಾಲೇಜುಗಳು ಪ್ರಾರಂಭವಾಗಿ 2–3 ತಿಂಗಳಾಯಿತು. ನನ್ನ ಕ್ಷೇತ್ರದಲ್ಲಿ 1993 ರಿಂದಲೂ ಕೂಡ ಖಾಲಿ ಇದೆ. ಈಗ ಕಾಲೇಜು ಪ್ರಾರಂಭ ಮಾಡಿ 2 ತಿಂಗಳಾದರೂ ಕೂಡ ಇನ್ನೂ ನೇಮಕಾತಿ ಪ್ರಕ್ರಿಯೆಯಲ್ಲಿ ಪ್ರಗತಿಯಾಗಿಲ್ಲ. ನನ್ನ ತಾಲ್ಲೂಕಿನ ಕ್ಷೇತ್ರದಲ್ಲಿ ಯಾವುದೇ ಕಾಲೇಜುಗಳಿಗೆ ಉಪನ್ಯಾಸಕರು ಬಂದಿಲ್ಲ. ಹಾಗಾಗಿ, ದಯಮಾಡಿ, ನನ್ನ ಕ್ಷೇತ್ರದಲ್ಲಿರುವ ಉಪನ್ಯಾಸಕರುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ಎನ್ನುವಂಥ ಖಚಿತವಾದಂಥ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಬಿ.ಎಸ್. ಹೊರಟ್ಟಿ :– ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಮತ ಕ್ಷೇತ್ರದಲ್ಲಿ ಉಪನ್ಯಾಸಕರ ಹುದ್ದೆ 1994 ರಿಂದ ಖಾಲಿ ಇದೆ. ಅದೇ ರೀತಿ, ರಾಜ್ಯಶಾಸ್ತ್ರ ಉಪನ್ಯಾಸಕರ ಹುದ್ದೆ 1993 ರಿಂದ, ಕನ್ನಡ ಉಪನ್ಯಾಸಕರ ಹುದ್ದೆ 1994 ರಿಂದ, ಇನ್ನೊಂದು ಕನ್ನಡ ಉಪನ್ಯಾಸಕರ ಹುದ್ದೆ 1994 ರಿಂದ ಖಾಲಿ ಇದೆ. ಇಲ್ಲಿಯವರೆಗೆ ಶಿಕ್ಷಕರಿಲ್ಲದೇ ಈ ಕಾಲೇಜುಗಳು ನಡೆದಿವೆ. Part time ಆಗಿ ತೆಗೆದುಕೊಳ್ಳುವುದು ಮತ್ತು ಎಲ್ಲೆಲ್ಲಿ available ಇದೆ, ಅಲ್ಲಿಂದ ತೆಗೆದುಕೊಂಡು ಮಾಡುವಂಥ ಕೆಲಸ ಮಾಡಿದ್ದೇವೆ. ನೇಮಕಾತಿ ಮಾಡಿಕೊಳ್ಳಲಿಕ್ಕೆ ಇದುವರೆಗೂ ಹಣಕಾಸು ಇಲಾಖೆಯವರು ಯಾವುದೇ ರೀತಿಯ ಅನುಮತಿ ಕೊಟ್ಟಿರಲಿಲ್ಲ. ಈಗಾಗಲೇ ನಾವು 205 ಉಪನ್ಯಾಸಕರಿಗೆ ಪದೋನ್ನತಿಯನ್ನು ಮಾಡಿ ಈಗಾಗಲೇ DPC ಆಗಿದೆ ಮತ್ತು ಅವರಿಗೆ ನಾವು counseling ಮೂಲಕ Principal ಹುದ್ದೆಯ ನೇಮಕಾತಿಯನ್ನು ಮಾಡುತ್ತೇವೆ.

12 / 13 ನೇ ಜುಲೈನಲ್ಲಿ ಕೌನ್ಸಿಲಿಂಗ್ ಮೂಲಕ ಸುಮಾರು 918 ಜನ ಪ್ರೌಢ ಶಾಲಾ ಶಿಕ್ಷಕರಿಗೆ ಪದೋನ್ನತಿಯನ್ನು ಕೊಟ್ಟಿದೆ. ಆ ರೀತಿ ಕೊಟ್ಟಾಗ ಏನಾಗಿದೆ ಎಂದರೆ, ಅಲ್ಲಿ ಕೌನ್ಸಿಲಿಂಗ್ ಮುಖಾಂತರ ಮಾಡುವುದರಿಂದ ಅಲ್ಲಿಗೆ

ಯಾರೂ ಹೋಗಿಲ್ಲ. ಆದ್ದರಿಂದ, ಆ ಹುದ್ದೆ ಖಾಲಿ ಇದೆ. ಈಗ KPSC ಮೂಲಕ 2175 ಹುದ್ದೆಗಳನ್ನು ಆಗಲೇ ನಾವು ತುಂಬಲು ಹಣಕಾಸು ಇಲಾಖೆ ಅನುಮತಿ ಕೊಟ್ಟಿದ್ದು, KPSC ಗೆ ವಹಿಸಿದ್ದೇವೆ. ಅವರು 475 ಹುದ್ದೆಯನ್ನು ನೇಮಕಾತಿ ಮಾಡಿದ್ದಾರೆ. ಕೆಲವನ್ನು ಕೊಟ್ಟಿದ್ದಾರೆ. ಈಗಾಗಲೇ ನಾವು ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಖಂಡಿತವಾಗಿ ಇಂಥ ಪ್ರದೇಶಗಳಿಗೆ ಅವರನ್ನು ನೇಮಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಮೊಟ್ಟಮೊದಲನೆಯದಾಗಿ ಅವರ ನೇಮಕಾತಿಯಾದಾಗ ಅವರನ್ನು ಹಳ್ಳಿಗೇ ನೇಮಿಸಬೇಕು.

ಏಕೆಂದರೆ, ಯಾರೂ ಹಳ್ಳಿಗೆ ಹೋಗುವುದಿಲ್ಲ. ಎಲ್ಲರೂ ಪಟ್ಟಣಕ್ಕೆ ಹೋಗುತ್ತಾರೆ. ಅದು ಆಗಬಾರದೆಂದು ವರ್ಗಾವಣೆ ನೀತಿಯನ್ನು ಬದಲಾವಣೆ ಮಾಡಿದ್ದೇವೆ. ಅವರನ್ನು ಅಲ್ಲಿಗೆ ನೇಮಿಸುವಂಥ ಕೆಲಸ ಮಾಡುತ್ತೇವೆ. 1700 ಹುದ್ದೆಗಳಿಗೆ ಈಗಾಗಲೇ ಅಧಿಸೂಚನೆ ಹೊರಡಿಸಿದ್ದೇವೆ. ಬರುವ ದಿನಗಳಲ್ಲಿ ಈ ಎಲ್ಲಾ ಹುದ್ದೆಗಳನ್ನು ತುಂಬುತ್ತೇವೆ. ಹಣಕಾಸು ಇಲಾಖೆಯವರು ಅನುಮತಿಯನ್ನು ಬೇಗ ಬೇಗನೆ ನಮಗೆ ಕೊಡದಿದ್ದ ಕಾರಣ ಅದನ್ನು ತುಂಬುವಲ್ಲಿ ತೊಂದರೆಯಾಗಿದೆ. ಈ ದಿಶೆಯಲ್ಲಿ ತಕ್ಷಣದಿಂದ ನೇಮಕಾತಿ ಮಾಡುವುದು ಮತ್ತು ಸ್ಥಳಗಳಿಗೆ ನೇಮಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ತಪ್ಪು ಮಾಹಿತಿ ಕೊಟ್ಟಿದ್ದೀರೆಂದು ತಾವೇನು ಹೇಳಿದ್ದೀರಿ, ನಿಮ್ಮ ಪ್ರಶ್ನೆ ಬಂದ ನಂತರ ಕೆಲವರನ್ನು ಆಗಲೇ posting ಮಾಡಿದ್ದಾರೆ. ಆಕಸ್ಮಾತ್ ಏನಾದರೂ ಇದ್ದರೆ, ನಾನು ಇವತ್ತೇ ಅಧಿಕಾರಿಗಳ ಜೊತೆ ಚರ್ಚಿಸಿ ತಕ್ಷಣ ಕ್ರಮ ತೆಗದುಕೊಳ್ಳುವ ಕೆಲಸ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ವಿ. ಸುನೀಲ್ ಕುಮಾರ್ :– KPSC ಮೂಲಕ 2175 ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈಗಾಗಲೇ ನಿಮ್ಮ ಗಮನಕ್ಕೆ ಬಂದಿರಬಹುದು, ಬೇರೆ ಬೇರೆ ಕಾಲೇಜುಗಳಿಗೆ ಹತ್ತಾರು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ಉಪನ್ಯಾಸಕರು ರಾಜ್ಯದಲ್ಲಿ ಸಾವಿರಾರು ಜನರಿದ್ದಾರೆ. ಅವರನ್ನು ಖಾಯಂಗೊಳಿಸಬೇಕೆಂಬ ಪ್ರತಿಭಟನೆ ಕೂಡ ಅಲ್ಲಲ್ಲಿ ಎಲ್ಲಾ ಕಡೆ ಈಗಾಗಲೇ ಪ್ರಾರಂಭವಾಗಿದೆ. ಈ ಹಿನ್ನೆಲೆಯಲ್ಲಿ ನೀವು ಈ ಹೊಸ ನೇಮಕಾತಿಗಳನ್ನು ಮಾಡುವ ಸಂದರ್ಭದಲ್ಲಿ ಅವರನ್ನೂ ಆದ್ಯತೆ ಮೇರೆಗೆ ಪರಿಗಣಿಸಿದರೆ ಒಳ್ಳೆಯದಾಗುತ್ತದೆ. ಈಗಾಗಲೇ ಕೆಲಸ ಮಾಡುತ್ತಿರುವ ಹಿನ್ನೆಲೆ ಇರುವುದರಿಂದ ಒಳ್ಳೆಯದಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನಿಲುವೇನೆಂಬುದನ್ನು ಸ್ಪಷ್ಟಪಡಿಸಬೇಕು. ಈಗಾಗಲೇ ಅಧಿಸೂಚನೆ ಹೊರಡಿಸಿರುವ

ಸಂಖ್ಯೆಯ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲು ಪ್ರಾರಂಭ ಮಾಡುತ್ತೀರಿ? ಈಗಾಗಲೇ ಅಧಿಸೂಚನೆ ಹೊರಡಿಸಿ ಒಂದು, ಒಂದೂವರೆ ತಿಂಗಳಾಗುತ್ತಾ ಬರುತ್ತಿದೆ. ಯಾವತ್ತು ಭರ್ತಿ ಮಾಡುತ್ತೀರಿ? ಮತ್ತು ಯಾವತ್ತಿನಿಂದ ನೇಮಕಾತಿ ಪ್ರಕ್ರಿಯೆ ಮಾಡಿ ನಮ್ಮ ಕಾಲೇಜುಗಳಿಗೆ ಬರುತ್ತಾರೆನ್ನುವುದನ್ನು ಕೂಡ ಮಾನ್ಯ ಸಚಿವರು ಸ್ಪಷ್ಟಪಡಸಬೇಕು.

ಶ್ರೀ ಬಿ.ಎಸ್. ಹೊರಟ್ಟಿ :– ನಾವು ಅದನ್ನು ಲೋಕಸೇವಾ ಆಯೋಗಕ್ಕೆ ಕೊಟ್ಟಿದ್ದೇವೆ. ನೇಮಕಾತಿ ಮಾಡುವ ಅಧಿಕಾರ ನಮಗಿಲ್ಲ. ನಾವು ಆಗಲೇ ಲೋಕಸೇವಾ ಆಯೋಗದವರ ಹತ್ತಿರ 2 ಸಲ ಮಾತನಾಡಿದ್ದು, ಪತ್ರವನ್ನೂ ಸಹ ಬರೆದಿದ್ದೇವೆ. ಆದಷ್ಟು ಶೀಘ್ರವಾಗಿ ನೇಮಕಾತಿ ಮಾಡಬೇಕೆಂದು ಹೇಳಿದ್ದೇವೆ. ನೇಮಕಾತಿ ಮಾಡಿಕೊಟ್ಟ ತಕ್ಷಣ ಇವರನ್ನು posting ಮಾಡುವುದನ್ನು ಮಾಡುತ್ತೇವೆ. 475 ಜನರನ್ನು ಈಗಾಗಲೇ ನೇಮಕಾತಿ ಮಾಡಿಕೊಟ್ಟಿದ್ದಾರೆ. ಅವರನ್ನೂ ಸಹ ಸ್ಥಳ ನಿಯೋಜನೆ ಮಾಡುವ ಕೆಲಸ ಮಾಡುತ್ತೇವೆ. ತಾವು ಹೇಳಿದ ಹಾಗೆ ಕೆಲವರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತೀರಿ, ನಿಯಮದ ಮೇರೆಗೆ ಏನು ಮಾಡುವುದಕ್ಕೆ ಸಾಧ್ಯವಿದೆ ಎಂದು ನೋಡಿ ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಶ್ರೀ ವಿ. ಸುನೀಲ್ ಕುಮಾರ್‌ರವರಿಗೆ ಸಂಬಂಧಪಟ್ಟ ಪ್ರಶ್ನೆ ಇದ್ದರೂ ಕೂಡ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. ಅದರಲ್ಲೂ ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ border ತಾಲ್ಲೂಕಿನಲ್ಲಿ ಇವರೇನು teacher ಅನ್ನು ಕಳುಹಿಸುತ್ತಾರೋ ಅವರೊಬ್ಬರೂ ಕೂಡ ಅಲ್ಲಿಗೆ ಹಾಜರಾಗುವುದಿಲ್ಲ. ಕಾರಣವೇನೆಂದರೆ merit ಮೇಲೆ Public Service Commission ನಿಂದ select ಆಗುತ್ತಾರೆ. ಸಂತೋಷ. ಆದರೆ ವಿಶೇಷವಾಗಿ Physics, Chemistry, Mathematics, English ಈ ವಿಷಯಗಳ ಶಿಕ್ಷಕರು ಇರಲಿಲ್ಲವೆಂದರೆ ಹುಡುಗರು PUC pass ಆಗುವುದು ಹೇಗೆ? ಆ ಮೇಲೆ professional courses ಗೆ entry ಆಗುವುದು ಹೇಗೆ? ಇದು ದೊಡ್ಡ ಪ್ರಶ್ನೆ ಇದೆ. ನಾನು ಹತ್ತು ಸಲ ಪತ್ರ ಬರೆದಿದ್ದೇನೆ. Commissioner ರವರಿಗೆ ಪತ್ರ ಬರೆದಿದ್ದೇನೆ. Principal Secretary ಯವರಿಗೂ ಪತ್ರ ಬರೆದಿದ್ದೇನೆ. ಅವರಿಗೂ ಹೇಳಿದ್ದೇನೆ.

(11 : 30 ಘಂಟೆ)

ಹೀಗೆ ಸಾಕಷ್ಟು ಸಾರಿ ಪ್ರಯತ್ನಗಳು ಆಗಿದೆ. ಇಲ್ಲಿಯವರೆಗೂ ಕೂಡ ಜೂನಿಯರ್ ಕಾಲೇಜುಗಳಲ್ಲಿ ವಿಶೇಷವಾಗಿ ಈ ನಾಲ್ಕು ವಿಷಯಕ್ಕೆ ಸಂಬಂಧಪಟ್ಟಂಥ ಶಿಕ್ಷಕರುಗಳ ಕೊರತೆಯಿದೆ. ಈಗಲಾದರೂ ನೀವು Public Service Commission ನಿಂದ recruitment ಮಾಡಿದರೂ ಬೆಂಗಳೂರು ಸುತ್ತಮುತ್ತ, ಧಾರವಾಡ ಸುತ್ತಮುತ್ತ ಅಥವಾ ಜಿಲ್ಲಾ ಮಟ್ಟದಲ್ಲಿ ಬರಬಹುದು. ಆದರೆ ಉಳಿದ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಬರುವುದಿಲ್ಲ. ಅದಕ್ಕೆ compulsory ಆಗಿ ನೀವು ಅವರನ್ನು ಹಾಕಲಿಕ್ಕೆ ಏನು ಮಾಡುತ್ತೀರಿ? ನಾವು ಅಲ್ಲಿಗೆ ಹೋದ ಕೂಡಲೇ ವಿದ್ಯಾರ್ಥಿಗಳು ನಮಗೆ ಘೇರಾವು ಮಾಡುತ್ತಾರೆ. ನಿಮ್ಮನ್ನು ಅವರು ಬಿಡುತ್ತಾರೆ, ನಮಗೆ ಘೇರಾವು ಮಾಡಿ ನೀವು ಮಾಡಿದರೆ ಆಗುತ್ತದೆ, ನೀವು ಏಕೆ ಮಾಡುವುದಿಲ್ಲವೆಂದು ಕೇಳುತ್ತಾರೆ. ನಾನು ಆಗ ಹೊರಟ್ಟಿಯವರು ನಮ್ಮ ಮಾತು ಕೇಳುವುದಿಲ್ಲ, ಅವರು ಈಗ ಆಡಳಿತದಲ್ಲಿದ್ದಾರೆ, ನಾವು ವಿರೋಧ ಪಕ್ಷದಲ್ಲಿದ್ದೇವೆಂದು ಅವರಿಗೆ ಹೇಳಬೇಕೆ? ಇದು ಆಗುವುದಿಲ್ಲ.

ಈಗ finance department ನವರು ನೀವು ಕಳುಹಿಸಿದ proposal ಅನ್ನು ಒಪ್ಪುತ್ತಿಲ್ಲವೆಂದು ಹೇಳುತ್ತೀರಿ. ಶಿಕ್ಷಣ ಇಲಾಖೆಯಲ್ಲಿ, ಆರೋಗ್ಯ ಇಲಾಖೆಯಲ್ಲಿ, ಪೊಲೀಸ್ ಇಲಾಖೆಯಲ್ಲಿ ಈ ಮೂರು ಇಲಾಖೆಗಳಲ್ಲಿ economy order ಇಲ್ಲ. ಈಗ ನೀವು lift ಮಾಡಿದಿರಿ. ಆದರೆ ಈ ಮೂರು ಇಲಾಖೆಗೆ ಯಾವಾಗಲೂ ಕೂಡ economy order ಇಡಬಾರದೆಂದು ಕ್ಯಾಬಿನೆಟ್ ಡಿಸಿಷನ್ ಆಗಿದೆ. ಅದಕ್ಕೆ ದಯವಿಟ್ಟು ಅವರು ನಿಮ್ಮ recruitment ಅನ್ನು ಏಕೆ ನಿಲ್ಲಿಸುತ್ತಾರೆಂದು ಅರ್ಥವಾಗುತ್ತಿಲ್ಲ. ಅಥವಾ ನೀವು ಏನಾದರೂ ಅವರ ಜೊತೆಯಲ್ಲಿ ಒಳ್ಳೆಯ ಸಂಪರ್ಕ ಹೊಂದಿಲ್ಲವೋ? ಅಥವಾ ಅವರಿಗೆ ನೀವು ಏನಾದರೂ ಮುಂದಿನ ಮುಖ್ಯಮಂತ್ರಿಯನ್ನಾಗಿ ಮಾಡುವುದಿಲ್ಲವೆಂದು ಹೇಳಿದ್ದೀರೋ? ಏನಾದರೂ ತೊಂದರೆಯಿರಬೇಕು. ಇಲ್ಲಾಂದ್ರೆ ಬಹಳ ಸ್ಪಷ್ಟವಾಗಿ ಈ ಮೂರು ಇಲಾಖೆಗೆ economy order ಇಲ್ಲವೇ ಇಲ್ಲ. recruitment ಆಗಲೇಬೇಕು. posting ಆಗಲೇಬೇಕು. ದಯವಿಟ್ಟು ವಿಶೇಷವಾಗಿ border ಏರಿಯಾದಲ್ಲಿರುವ ಜೂನಿಯರ್ ಕಾಲೇಜುಗಳಿಗೆ posting ಕೊಡತಕ್ಕಂಥ ಕೆಲಸ ಮಾಡುತ್ತೀರೋ?

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ಈಗಾಗಲೇ ಕೆ.ಪಿ.ಎಸ್.ಸಿ ನಿಂದ ನೇಮಕಾತಿಯಾಗುವಂಥವರು ತಾವು ಹೇಳಿದ ಹಾಗೆ ಎಲ್ಲೂ ಹೋಗುತ್ತಿರಲಿಲ್ಲ. ಈಗ ನಾವು ನಿಯಮವನ್ನು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಇವರು ಮಾನ್ಯ ಬಸವರಾಜ್ ಎಸ್. ಹೊರಟ್ಟಿ ಎಂದು ಅಮೇರಿಕಾದಿಂದ recently ಬಂದಿದ್ದಾರೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ನೇಮಕಾತಿ ಮಾಡಲಿಕ್ಕೆ ನಾವು ಕೊಟ್ಟಿದ್ದೇವೆ. ಹೊಸ ನೇಮಕಾತಿಯಾದ ನಂತರ ಅವರು ಮೈಸೂರು ಮತ್ತು ಬೆಂಗಳೂರು ಸುತ್ತಮುತ್ತ ಬರುವುದಕ್ಕೆ ಸಾಧ್ಯವಿಲ್ಲ. ಅವರು ಈಗ ಹೊಸ ನಿಯಮದ ಪ್ರಕಾರ ಕಡ್ಡಾಯವಾಗಿ ಹಳ್ಳಿಗಳಿಗೆ ಹೋಗಬೇಕು. ಒಟ್ಟಿನಲ್ಲಿ ಪ್ರಕ್ರಿಯೆ ನಡೆದಿರುವುದು, 4568 ಜನ ಟೀಚರ್ಸ್ ನೇಮಕಾತಿ ಮಾಡಲಿಕ್ಕೆ ಹಣಕಾಸಿನ ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೆ. ಎಷ್ಟು post ಎಂದು ಅಧಿಕಾರಿಗಳು ಮಾಹಿತಿ ತರಿಸುತ್ತಿದ್ದಾರೆ. ಆ ಮಾಹಿತಿಗಳನ್ನು ತರಿಸಿ ನಾವು ಕೊಡುತ್ತಿದ್ದೇವೆ. ಆದರೆ ಆರ್ಥಿಕ ಮಿತಿ ಆದೇಶವನ್ನು ಅವರು ಹಿಂತೆಗೆದುಕೊಂಡಿಲ್ಲ. 17–01–2004 ಕ್ಕೆ ಆರ್ಥಿಕ ಮಿತಿ ಆದೇಶ ಜಾರಿಯಲ್ಲಿ ಬಂದಿತ್ತು. 31–05–2006 ರವರೆಗೆ ಎಷ್ಟೆಷ್ಟು ಸ್ಥಳಗಳಲ್ಲಿ ಖಾಲಿ ಇದೆ ಅಷ್ಟನ್ನು ತುಂಬಿದ್ದೇವೆ. ಉಳಿದವುಗಳನ್ನು ತುಂಬಲಿಕ್ಕೆ ಮತ್ತೆ ಆರ್ಥಿಕ ಇಲಾಖೆಯವರನ್ನು ಕೇಳಿದ್ದೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಇಲ್ಲಿ ಏನಾಗುತ್ತದೆಂದರೆ Private Colleges ಬಹಳ ಬಂದು ಬಿಟ್ಟಿವೆ. ದುಡ್ಡು ಇದ್ದವರೆಲ್ಲ ಅಲ್ಲಿಗೆ ಹೋಗುತ್ತಾರೆ. II-PUC ಅವರ ಭವಿಷ್ಯ ನಿರ್ಣಯವಾಗತಕ್ಕಂಥ ಬಹಳ ಸೂಕ್ಷ್ಮವಾದಂಥ ಘಟ್ಟ, particularly ನಮಗೆ ಗ್ರಾಮೀಣ ಪ್ರದೇಶದಲ್ಲಿ English, Mathematics ಉತ್ತರ ಕನ್ನಡ ಮತ್ತು ಶಿವಮೊಗ್ಗ ಈ ಭಾಗದಿಂದ ಬರುವವರು ಬಹಳ ಜಾಣರು, ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಟೀಚರ್ ಆಗಿ ಸೆಲೆಕ್ಟ್ ಆಗುತ್ತಾರೆ ಮತ್ತು ಪಾಠವನ್ನು ಕೂಡ ಚೆನ್ನಾಗಿ ಮಾಡುತ್ತಾರೆ. ಅವರು ಏನು ಮಾಡುತ್ತಾರೆಂದರೆ, ಬರುತ್ತಾರೆ ಸ್ವಲ್ಪ ದಿವಸ ಇಲ್ಲಿ ಪಾಠ ಮಾಡಿ ಪುನಃ ವಾಪಸ್ ಹೋಗಲಿಕ್ಕೆ ಟ್ರೈ ಮಾಡುತ್ತಾರೆ. ಹೆಚ್ಚಿಗೆ ಜನ ಅವರಿಗೆ ಸೆಲೆಕ್ಟ್ ಮಾಡಿ.

ಏಕೆಂದರೆ, they teach well, they are intelligent. ನಮಗೆ ಏನೆಂದರೆ, ವಿಶೇಷವಾಗಿ English, Mathematics, Science. Government Pre-University college ನಲ್ಲಿ ಈ ಪಾಠ ಮಾಡಲಿಕ್ಕೆ ಮೆಷ್ಟ್ರುಗಳು ಇಲ್ಲದೇ ಹೋದರೆ, ನಮ್ಮ ಹುಡುಗರ ಭವಿಷ್ಯ ಏನಾಗುತ್ತದೆ? They cannot go to private college. Government college ನಲ್ಲಿ

specialties ಇಲ್ಲ. So in a way indirect ಆಗಿ, ಮಧ್ಯಮ ವರ್ಗದ, ಬಡ ವರ್ಗದ ಮಕ್ಕಳ ಭವಿಷ್ಯವನ್ನು ನಾವೇ ಅಲ್ಲಿಂದ ಅಲ್ಲಿಗೆ stop ಮಾಡಿದ ಹಾಗೆ ಆಗುತ್ತದೆ. ಇದರಿಂದ ಬಹಳ far-reaching effect ಆಗುತ್ತದೆ. ದಯಮಾಡಿ You have to apply your mind, particularly to this. ಬಹಳ ಜಾಗ್ರತೆಯಿಂದ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ಮಾನ್ಯ ಹಿರಿಯ ಸದಸ್ಯರುಗಳು ಏನು ಹೇಳಿದ್ದಾರೆ, ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ನಾವು 2010 ರವರೆಗೆ retired ಆಗುವಂಥ ಹುದ್ದೆಗಳ ಸಂಖ್ಯೆ ಎಷ್ಟು ಎಂಬ ಬಗ್ಗೆ ಮಾಹಿತಿ ತರಿಸಿದ್ದೇವೆ. ಈಗಾಗಲೇ 2008 ರವರೆಗೆ ಅನುಮತಿಯನ್ನು ಕೊಟ್ಟಿದ್ದಾರೆ. ಹಿಂದೆ ಈ ಪದ್ಧತಿಯನ್ನು ಮಾಡಿರಲಿಲ್ಲ. ಇದನ್ನು 2010 ರವರೆಗೆ primary, secondary & junior colleges ನಲ್ಲಿ ಎಷ್ಟು ಖಾಲಿ ಹುದ್ದೆಗಳಿವೆ ಎಂಬ ಮಾಹಿತಿಯನ್ನು ತರಿಸಿದ್ದೇವೆ. ಇದಕ್ಕೆ 2008 ರವರೆಗೆ ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೆ.

ಅದರಂತೆ 2175 ಜನರಿಗೆ ಹಣಕಾಸಿನ ಇಲಾಖೆಯವರು ಅನುಮತಿಯನ್ನು ನೀಡಿದ್ದು ಇದನ್ನು KPSC ಯ ಮೂಲಕ ತುಂಬಲಿಕ್ಕೆ ಕೊಟ್ಟಿದ್ದೇವೆ. 475 ಮಂದಿಯನ್ನು ಈಗಾಗಲೇ ಅವರು ಕೊಟ್ಟಿದ್ದಾರೆ ಅವರನ್ನು ನಾವೀಗ posting ಮಾಡುತ್ತಿದ್ದೇವೆ. ಮತ್ತು 918 ಮಂದಿಗೆ ನಾವು ಪ್ರಮೋಷನ್ ಮಾಡಿ ಈಗಾಗಲೇ ಅವರನ್ನು posting ಮಾಡಿದ್ದೇವೆ. 17 ಜನರಿಗೂ ಅನುಮತಿ ಕೊಡಲಾಗಿದೆ. ಒಟ್ಟಿಗೆ 4568 ಜನರನ್ನು ತಕ್ಷಣ 15–20 ದಿವಸಗಳಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಮಾಡಿದ್ದೇವೆ. KPSC ಗೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇವೆ. ಅದರ ಜೊತೆಗೆ ಇವತ್ತು ಏನಾಗಿದೆಯೆಂದರೆ, ಮಾನ್ಯ ಸದಸ್ಯರಾದ ಸುನೀಲ್‌ರವರು ಹೇಳಿದ ಹಾಗೆ. ಇಲ್ಲಿ ಒಂದು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಏಳು ಜನರನ್ನು ಆಗಲೇ ನಿಮ್ಮ ಪ್ರಶ್ನೆ ಬಂದ ನಂತರ posting ಮಾಡಿದ್ದೇವೆ. ಏಳು ಜನರು ಬರುವುದಕ್ಕಿಂತ ಮೊದಲು ನೀವು ಪ್ರಶ್ನೆ ಹಾಕಿದ್ದೀರಿ. ನಿಮ್ಮ ಪ್ರಶ್ನೆ ಬರುವುದಕ್ಕಿಂತ ಮೊದಲೇ ಏಳು ಜನರನ್ನು post ಮಾಡಿದ್ದೇವೆ. ಈಗ 16 ಜನರನ್ನು ಮಾಡಬೇಕಾಗಿದೆ. ನೀವು ಹೇಳಿದ್ದು ನಿಜವಿದೆ. ಆ 16 ಜನರನ್ನು ಮಾಡುತ್ತೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ, ಆರ್ಥಿಕ ಇಲಾಖೆಯವರು ಇದುವರೆಗೆ ಆರ್ಥಿಕ ಮಿತಿಯನ್ನು ತೆಗೆದಿಲ್ಲ. ನಾವು ಯಾವ್ಯಾವಾಗ ಕಳುಹಿಸಿ

ಕೊಡುತ್ತೇವೆ ಅವರು ವೆರಿಫೈ ಮಾಡುತ್ತಾರೆ, ಮತ್ತೆ ಮಾಹಿತಿ ಕೇಳುತ್ತಾರೆ, ಮತ್ತೆ ಕಳುಹಿಸಿ ಕೊಡುತ್ತೇವೆ. ಹೀಗಾಗಿ ಆರ್ಥಿಕ ಮಿತವ್ಯಯ ಆದೇಶ, ಯಾವಾಗ ಹುದ್ದೆಗಳು ಖಾಲಿಯಾಗುತ್ತವೆ ಆಗ ನಮಗೆ ತುಂಬಲಿಕ್ಕೆ ಅನುಮತಿಯನ್ನು ಕೊಟ್ಟರೆ ಬಹಳ ಸರಳವಾಗುತ್ತದೆ. ಇವತ್ತು ನಾವು ಇಂಥ ಹುದ್ದೆಗಳು ಖಾಲಿ ಇವೆ ಎಂದಾಗ ವೆರಿಫೈ ಮಾಡಿ, ನೋಡಿ, ಅನುಮತಿಯನ್ನು ಕೊಡುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಆರ್ಥಿಕ ಮಿತಿ ಆದೇಶವನ್ನು ಸಡಿಸಲಿಕ್ಕೆ ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗುತ್ತೇನೆ.

<u>ಸಾಕ್ಷರತಾ ಸಂಯೋಜಕರ ವಿವರ :–</u>

107 (991) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಂದುವರೆದ ಶಿಕ್ಷಣ ಸಾಕ್ಷರತಾ ಸಂಯೋಜಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಜಿಲ್ಲಾ ಸಾಕ್ಷರತಾ ಸಂಯೋಜಕರ ಹುದ್ದೆಗಳನ್ನು ಸರ್ಕಾರ ರದ್ದುಪಡಿಸಿರುವ ವಿಚಾರ ನಿಜವೇ;

ಇ) ಜಿಲ್ಲಾ ಸಾಕ್ಷರತಾ ಸಂಯೋಜಕರ ಹುದ್ದೆ ರದ್ದತಿಯಿಂದ ಮುಂದುವರೆದ ಶಿಕ್ಷಣ ಕೇಂದ್ರಗಳು ಮುಚ್ಚುವ ಸ್ಥಿತಿಯಲ್ಲಿರುವುದು ನಿಜವೇ;

ಈ) ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಮುಂದುವರಿಕೆ ಶಿಕ್ಷಣಕ್ಕಾಗಿ ಬಿಡುಗಡೆ ಮಾಡಿದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಹಣವೆಷ್ಟು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 334 ಸಂಯೋಜಕರು ಕಾರ್ಯನಿರ್ವಹಿಸುತ್ತಿರುತ್ತಾರೆ. (ಜಿಲ್ಲಾವಾರು ಸಂಯೋಜಕರ ಸಂಖ್ಯೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ.)

ಆ) ಇಲ್ಲ

ಇ) ಇಲ್ಲ